

‘ದೇವಸ್ಥಾನಗಳಿಗೆ ವಿಧಿಸುವ ನಿರ್ಬಂಧಗಳನ್ನು ಐತಿಹಾಸಿಕ, ಪಾರಂಪರಿಕ ತಾಣಗಳಿಗೂ ಅನ್ವಯಿಸುವುದು ಸರಿಯಲ್ಲ.

**-ಇಷ್ಟಲಿಂಗ ಶಿರಸಿ,**
ಸಾಮಾಜಿಕ ಕಾರ್ಯಕರ್ತ



ಕಾವೇರಿ ನದಿಯಲ್ಲಿ ರಿವರ್ ರ್‍ಯಾಫ್ಟಿಂಗ್

ಈಗ ಬರುತ್ತಿಲ್ಲ’ ಎಂದು ‘ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ’ಯ ಅಧಿಕಾರಿ ಮೌನೇಶ ಕುರವತ್ತಿ ‘ಸುಧಾ’ಕ್ಕೆ ತಿಳಿಸಿದರು.

ಹಂಪಿ, ಬಾದಾಮಿ, ಪಟ್ಟದಕಲ್ಲು, ಐಹೊಳೆ ಸೇರಿದಂತೆ ಹಲವು ಪಾರಂಪರಿಕ ತಾಣಗಳಲ್ಲಿ ಕೆಲಸ ಮಾಡುವ ಗೈಡ್‌ಗಳು ಕೋವಿಡ್ ಬಿಕ್ಕಟ್ಟಿನಿಂದ ಸಂಕಷ್ಟಕ್ಕೆ ಒಳಗಾಗಿದ್ದಾರೆ. ವಿದೇಶಿ ಪ್ರವಾಸಿಗರನ್ನೇ ಹೆಚ್ಚು ನೆಚ್ಚಿಕೊಂಡಿದ್ದ ಇವರು, ಈಗ ಬೇರೆ ಆದಾಯ ಮೂಲವಿಲ್ಲದೆ ಕಂಗಾಲಾಗಿದ್ದಾರೆ.

ಬಾದಾಮಿ, ಪಟ್ಟದಕಲ್ಲು, ಐಹೊಳೆ ವ್ಯಾಪ್ತಿಯಲ್ಲಿಯೇ 150ಕ್ಕೂ ಹೆಚ್ಚು ಗೈಡ್‌ಗಳು ಇದ್ದಾರೆ. ಪ್ರವಾಸೋದ್ಯಮ ಇಲಾಖೆಯ ಬಳಿ ಅವರ ಮಾಹಿತಿಯೂ ಇದೆ. ಸಮಾಜದ ಹಲವು ವರ್ಗಗಳಿಗೆ ಪ್ಯಾಕೇಜ್ ಘೋಷಿಸಿದ ಸರ್ಕಾರ, ಗೈಡ್‌ಗಳಿಗೂ ತಲಾ ₹10 ಸಾವಿರ ಪರಿಹಾರ ಘೋಷಿಸಿದರೆ ಅನುಕೂಲವಾಗುತ್ತದೆ ಎಂದು ಇಷ್ಟಲಿಂಗ ಶಿರಸಿ ಮನವಿ ಮಾಡುತ್ತಾರೆ.

## ತಗ್ಗಿದ ‘ಪ್ರತೀಕಾರ ಪ್ರವಾಸೋದ್ಯಮ’ದ ಅಬ್ಬರ!

ಅನ್‌ಲಾಕ್ ಘೋಷಣೆಯಾದ ನಂತರ ರಾಜ್ಯ ಮಾತ್ರವಲ್ಲದೆ, ದೇಶದೆಲ್ಲೆಡೆ ಜನರು ಪ್ರವಾಸಿ ತಾಣಗಳಿಗೆ ಲಗ್ಗೆ ಇಟ್ಟಿದ್ದರು. ಹೋಟೆಲ್, ರೆಸಾರ್ಟ್, ಹೋಮ್‌ಸ್ಟೇಗಳು, ಅತಿಥಿ ಗೃಹಗಳು ಮೊದಲಿನ ಕಳೆ ಪಡೆದುಕೊಂಡಿದ್ದವು. ಕೊರೊನಾ ವಿರುದ್ಧ ‘ಸೇಡು’ ತೀರಿಸಿಕೊಳ್ಳುವಂತೆ ಹೀಗೆ ಪ್ರವಾಸೀಧಾಮಗಳತ್ತ ಜನ ದಾಂಗುಡಿ ಇಟ್ಟಿದ್ದನ್ನು ‘ಪ್ರತೀಕಾರದ ಪ್ರವಾಸೋದ್ಯಮ’ (ರಿವೆಂಜ್ ಟೂರಿಸಂ) ಎಂದು ಕರೆಯಲಾಗಿತ್ತು.

ಸೋಂಕು ಹರಡುವ ಭೀತಿ ಹೆಚ್ಚೇ ಆಗಿದ್ದರೂ, ಕುಸಿದಿದ್ದ ಪ್ರವಾಸೋದ್ಯಮಕ್ಕೆ ಇದು ಹೊಸ ಶಕ್ತಿ ನೀಡಿತ್ತು. ಆದರೆ, ಈಗ ಮೂರನೇ ಅಲೆಯ ಆತಂಕ ಮತ್ತು ಹಲವು ನಿರ್ಬಂಧಗಳ ಪರಿಣಾಮ ‘ರಿವೆಂಜ್ ಟೂರಿಸಂ’ ಅಬ್ಬರ ತಗ್ಗಿದೆ. ಪ್ಯಾಕೇಜ್ ಟೂರ್‌ಗಳ ಘೋಷಣೆಗಳೂ ಕಡಿಮೆಯಾಗಿವೆ.

‘ಸುಮಾರು ಒಂದು ವರ್ಷದಿಂದ ಮನೆಯಲ್ಲಿಯೇ ಕೂತು ಕೂತು ಬೇಸರವಾಗಿದೆ ಎಂದು ಜನ ಪ್ರವಾಸಕ್ಕೆ ಅಣಿಯಾಗಿದ್ದರು. ಲಾಂಗ್ ಸ್ಟೇ, ಶಾರ್ಟ್ ಸ್ಟೇ, ವೀಕೆಂಡ್ ಸ್ಟೇ ಎಂದು ಜನ ಬಂದು ಬಿಟ್ಟರು. ಅದಕ್ಕೆ ರಿವೆಂಜ್ ಟೂರಿಸಂ ಹಾಗೆ ಹೀಗೆ ಎಂದು ಹೆಸರುಕೊಟ್ಟು ಸೋಂಕು ಹೆಚ್ಚು ಹರಡಿಬಿಡುತ್ತದೆಯೇನೋ ಎಂಬಂತೆ ಮಾಡಿಬಿಟ್ಟರು. ಮೂರನೇ ಅಲೆ ಆತಂಕದ ಪರಿಣಾಮ ಈಗ ಮತ್ತೆ ಪ್ರವಾಸಿಗರ ಸಂಖ್ಯೆ ತಗ್ಗಿದೆ. ಹೋಟೆಲ್‌ಗಳನ್ನು ನಡೆಸುತ್ತಿದ್ದವರಿಗೆ, ಜನಪದ ಕಲಾವಿದರಿಗೆ, ಗೈಡ್‌ಗಳಿಗೆ ದೊಡ್ಡ ಹೊಡೆತ ಬಿದ್ದಿದೆ. ಟ್ಯಾಕ್ಸಿಗಳನ್ನು ಮಾರಾಟ ಮಾಡಿಕೊಂಡು ಹೋಗುತ್ತಿದ್ದಾರೆ. ಟೂರಿಸ್ಟ್ ಬಸ್‌ಗಳನ್ನು ಕೇಳುವವರೇ ಇಲ್ಲ’ ಎಂದು ‘ಕರ್ನಾಟಕ ಟೂರಿಸಂ ಫೋರಂ’ ಉಪಾಧ್ಯಕ್ಷ ಹಾಗೂ ‘ಕರ್ನಾಟಕ ಟೂರಿಸಂ ಸೊಸೈಟಿ’ ಜಂಟಿ ಕಾರ್ಯದರ್ಶಿ

### ಪ್ರವಾಸೋದ್ಯಮಕ್ಕೆ ಆದ್ಯತೆ ನೀಡಿದರೆ ಪರಿಸರ ರಕ್ಷಣೆ!

ಲಾಕ್‌ಡೌನ್‌ನಂತಹ ಕ್ರಮಗಳಿಂದ ಪರಿಸರಕ್ಕೆ ಒಳ್ಳೆಯದೇ ಆಗಿತ್ತು. ಗಾಳಿ ಶುದ್ಧವಾಗಿತ್ತು. ನದಿ–ಸಾಗರಗಳು ಸ್ವಚ್ಛವಾಗಿದ್ದವು. ವನ್ಯಜೀವಿಗಳು ರಸ್ತೆಗಳಲ್ಲಿ ಓಡಾಡುತ್ತಿದ್ದವು. ಪ್ರವಾಸೋದ್ಯಮದಲ್ಲಿ ಈಗಿರುವ ನಿರ್ಬಂಧಗಳನ್ನು ಸಡಿಲಗೊಳಿಸಿದರೆ ಮತ್ತೆ ಪರಿಸರ ಮಾಲಿನ್ಯ ಹೆಚ್ಚಾಗುತ್ತದೆ. ಅರಣ್ಯಪ್ರದೇಶ ಸೇರಿದಂತೆ ಪ್ರಾಣಿ, ಪಕ್ಷಿ, ಜಲಲೋಕದಲ್ಲಿ ಮಾನವನ ಪ್ರವೇಶ ಆದಷ್ಟು ತಗ್ಗಿಸಲೇಬೇಕು ಎಂಬ ಒತ್ತಾಯವೂ ಇದೆ. ಆದರೆ, ಪ್ರವಾಸೋದ್ಯಮಿಗಳು ಇದಕ್ಕೆ ಭಿನ್ನವಾದ ವಾದವೊಂದನ್ನು ಮುಂದಿಡುತ್ತಾರೆ.

‘ಪ್ರವಾಸೋದ್ಯಮಕ್ಕೆ ಆದ್ಯತೆ ನೀಡಿದಷ್ಟೂ ಪರಿಸರ ರಕ್ಷಣೆಯಾಗುತ್ತದೆ. ಕಾಡಂಚಿನ ಊರುಗಳಲ್ಲಿ ಇರುವವರು, ಪ್ರವಾಸಿ ತಾಣಗಳ ಬಳಿ ಇರುವ ಅನೇಕರು ಜೀವನೋಪಾಯಕ್ಕಾಗಿ ಮರಗಳನ್ನು ಕಡಿಯುವ, ಪ್ರಾಣಿಗಳನ್ನು ಕೊಂದು ಮಾರುವ ಅನಿವಾರ್ಯತೆಯಲ್ಲಿ ಇದ್ದರು. ದೂರದ ಊರಿಗೆ ಬಂದು ಬೇರೆ ಕೆಲಸ ಮಾಡುವುದೂ ಅವರಿಗೆ ದುಸ್ತರವಾಗಿತ್ತು. ಈಗ ಕಾಡಂಚಿನಲ್ಲಿ ಹೋಮ್‌ಸ್ಟೇಗಳು, ಹೋಟೆಲ್‌ಗಳು, ಅಂಗಡಿ–ಮುಂಗಟ್ಟು ತೆರೆದಿರುವುದರಿಂದ ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಮಹಿಳೆಯರು ಸಹಾಯಕರಾಗಿ, ಪುರುಷರು ಕಾವಲುಗಾರರಾಗಿ ಬದುಕು ಕಟ್ಟಿಕೊಂಡಿದ್ದಾರೆ’ ಎಂದು ಕರ್ನಾಟಕ ಟೂರಿಸಂ ಸೊಸೈಟಿಯ ರಾಜ್ಯ ಘಟಕದ ಮುಖ್ಯಸ್ಥರೂ ಆಗಿರುವ ಎಸ್. ಮಹಾಲಿಂಗಯ್ಯ ಹೇಳುತ್ತಾರೆ.

‘ಕಾಡುನಾಶದಂತಹ ಚಟುವಟಿಕೆಗಳು ಇದರಿಂದ ಕಡಿಮೆಯಾಗಿವೆ. ಪ್ರಾಣಿಗಳ ಬೇಟೆಯಾಡುವುದೂ ನಿಂತಿದೆ. ಗಾಯಗೊಂಡ ಪ್ರಾಣಿಗಳಿಗೆ ಈ ಜನರೇ ಆರೈಕೆ ಮಾಡಿ ಮರಳಿ ಕಾಡಿಗೆ ಬಿಡುತ್ತಿದ್ದಾರೆ. ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಿದರೆ, ಸ್ಥಳೀಯವಾಗಿ ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತವಲ್ಲದೆ ಪರಿಸರ ಸಂರಕ್ಷಣೆಯೂ ಸಾಧ್ಯವಾಗುತ್ತದೆ. ಅಲ್ಲದೆ, ಸರ್ಕಾರಕ್ಕೆ ಆದಾಯವೂ ಬರುತ್ತದೆ’ ಎಂದು ಅವರು ಅಭಿಪ್ರಾಯಪಟ್ಟರು.